ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 140/2015**

**ಫ್ರಾಸಾ- 35 ಚಾಸಾ- 56**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಶಾಂತಿನಾಥ ವಣ್ಣೂರು |
| ತಂದೆಯ ಹೆಸರುಃ | : | ಜಿನ್ನಪ್ಪ ವಣ್ಣೂರು |
| ವಯಸ್ಸುಃ | : | 47 ವರ್ಷ |
| ಉದ್ಯೋಗಃ | : | ಪಿಐ, ಕರ್ನಾಟಕ ಲೋಕಾಯುಕ್ತ, ಮೈಸೂರು |
| ವಾಸ | : | ಮೈಸೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: :18.03.2026**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಸೆಪ್ಟೆಂಬರ್ 2012 ರಿಂದ ಸೆಪ್ಟೆಂಬರ್ 2015 ರವರೆಗೆ ನಾನು ಹಾಸನ ಲೋಕಾಯುಕ್ತ ಪಿ ಎಸ್ ನಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 20-12-13ರಂದು ಈ ಪ್ರಕರಣದ ತನಿಖೆಯನ್ನು ಚಾಸಾ-54ರವರಿಂದ ವಹಿಸಿಕೊಂಡಿರುತ್ತೇನೆ. ದಿನಾಂಕ 20-1-14 ರಂದು ಆರೋಪಿತರ ಸೇವಾ ವಿವರ ಬಂದಿದ್ದು ಅದನ್ನು ನಿಪಿ-167ರಂತೆ ನಿಪಿ-168ರ ಪತ್ರದೊಂದಿಗೆ ಸ್ವೀಕರಿಸಿರುತ್ತೇನೆ. ಸ್ವೀಕರಿಸಿದ ಬಗ್ಗೆ 168ರಲ್ಲಿ ನನ್ನ ರುಜು ಇದ್ದು ನಿಪಿ-168(ಎ) ಎಂದು ಗುರುತಿಸಲಾಯಿತು.

3.ದಿನಾಂಕ 29-5-14ರಂದು ಆರೋಪಿತರು ಖರೀದಿಸಿದ ಚರ ಮತ್ತು ಸ್ಥಿರಾಸ್ತಿಗೆ ಸಂಬಂಧಿಸಿದಂತೆ ಯಾವುದೇ ಅನುಮತಿಯನ್ನು ಪಡೆದಿಲ್ಲ ಎಂಬ ಬಗ್ಗೆ ಜಯಚಾಮರಾಜೇಂದ್ರ ಸರ್ಕಾರಿ ಆಸ್ಪತ್ರೆ ಹಾಸನ ಇದರ ಜಿಲ್ಲಾ ಶಸ್ತ್ರಚಿಕಿತ್ಸಕರು ನೀಡಿದ ಮಾಹಿತಿಯನ್ನು ನಿಪಿ-169ರಂತೆ

ಸ್ವೀಕರಿಸಿರುತ್ತೇನೆ.

4.ದಿನಾಂಕ 13-6-14 ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಸನ ಇವರಿಗೆ ಆರೋಪಿತರು ಎಪಿಆರ್ ಸಲ್ಲಿಸಿದ ಬಗ್ಗೆ ದೃಢೀಕೃತ ಪ್ರತಿ ನೀಡುವಂತೆ ಹಾಗೂ ಸಲ್ಲಿಸದೇ ಇದ್ದಲ್ಲಿ ಯಾವ ವರ್ಷದಲ್ಲಿ ಸಲ್ಲಿಸಿಲ್ಲ ಎಂಬ ಬಗ್ಗೆ ಮಾಹಿತಿ ಕೋರಿ ಪತ್ರ ಬರೆದಿರುತ್ತೇನೆ. ಸದರಿಯವರು ದಿಃ19-6-14ರ ಪತ್ರದಲ್ಲಿ ದಿಃ1-6-1992 ರಿಂದ 14-12-1995ರವರೆಗೆ ಮತ್ತು ದಿಃ7-3-2006ರಿಂದ 19-11-2010ರವರೆಗೆ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು ವಾರ್ಷಿಕ ಕಾರ್ಯನಿರ್ವಹಣಾ ವರದಿ ಸಲ್ಲಿಸಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು **ನಿಪಿ-170**ಎಂದು ಗುರುತಿಸಲಾಯಿತು.

5.ದಿನಾಂಕ 19-11-14ರಂದು ವೈದ್ಯರು ಪ್ರಾಥಮಿಕ ಆರೋಗ್ಯ ಕೇಂದ್ರ ಅರೆಹಳ್ಳಿ ಇವರಿಗೆ ಆರೋಪಿತರು ಸದರಿ ಕಛೇರಿಯಲ್ಲಿ ಕೆಲಸ ಮಾಡಿದ ಸಂದರ್ಭದಲ್ಲಿ ಸಲ್ಲಿಸಿದ ಮತ್ತು ಸಲ್ಲಿಸದೇ ಇರುವ ಎಪಿಆರ್ ಮಾಹಿತಿ ನೀಡುವಂತೆ ಕೇಳಿಕೊಂಡಿರುತ್ತೇನೆ. ಸದರಿಯವರು ದಿಃ9-5-1984ರಿಂದ 5-7-1986 ರವರೆಗೆ ದ್ವಿದ.ಸ.ನಾಗಿ ಕರ್ತವ್ಯ ನಿರ್ವಹಿಸಿರುವುದಾಗಿ ಆ ಸಮಯದಲ್ಲಿ ಚರಾಸ್ತಿ ಸ್ಥಿರಾಸ್ತಿ ಬಗ್ಗೆ ವರದಿ ಮಾಡಿಲ್ಲವೆಂದು ಮಾಹಿತಿ ನೀಡಿರುತ್ತಾರೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು **ನಿಪಿ-171** ಎಂದು ಗುರುತಿಸಲಾಯಿತು.

6.ದಿನಾಂಕ 19-1-14ರಂದು ವೈದ್ಯರು ಪ್ರಾಥಮಿಕ ಆರೋಗ್ಯಕೇಂದ್ರ ಕುಂದೂರುಮಠ, ಇವರಿಗೆ ಆರೋಪಿತರು ಸದರಿ ಕಛೇರಿಯಲ್ಲಿ ಕೆಲಸ ಮಾಡಿದ ಸಂದರ್ಭದಲ್ಲಿ ಸಲ್ಲಿಸಿದ ಮತ್ತು ಸಲ್ಲಿಸದೇ ಇರುವ ಎಪಿಆರ್ ಮಾಹಿತಿ ನೀಡುವಂತೆ ಕೇಳಿಕೊಂಡಿರುತ್ತೇನೆ. ಅದಕ್ಕೆ ಸದರಿಯವರು ದಿಃ1-12-14 ರ ಪತ್ರದಂತೆ ಮಾಹಿತಿ ನೀಡಿ ಸದರಿಯವರು 22-12-95 ರಿಂದ 26-7-2000ದವರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರ.ದ.ಸ. ಆಗಿ ಕರ್ತವ್ಯನಿರ್ವಹಿಸಿದ್ದು ಸದರಿ ಅವಧಿಯಲ್ಲಿ ಯಾವುದೇ ಎಪಿಆರ್( ಸಲ್ಲಿಸಿಲ್ಲ ಎದು ಮಾಹಿತಿ ನೀಡಿರುತ್ತಾರೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-172 ಎದು ಅದರಲ್ಲಿ ನನ್ನ ರುಜು ಇದ್ದು ನಿಪಿ-172(ಎ) ಎಂದು ಗುರುತಿಸಲಾಯಿತು.

7.ದಿನಾಂಕ 19-1-14ರಂದು ಸಮುದಾಯ ಆರೋಗ್ಯ ಕೇಂದ್ರ ಉದಯಪುರ ಇವರಿಗೆ ಆರೋಪಿತರು ಸದರಿ ಕಛೇರಿಯಲ್ಲಿ ಕೆಲಸ ಮಾಡಿದ ಸಂದರ್ಭದಲ್ಲಿ ಸಲ್ಲಿಸಿದ ಮತ್ತು ಸಲ್ಲಿಸದೇ ಇರುವ ಎಪಿಆರ್ ಮಾಹಿತಿ ನೀಡುವಂತೆ ಕೇಳಿಕೊಂಡಿರುತ್ತೇನೆ. ಅದಕ್ಕೆ ಸದರಿಯಿವರು ದಿಃ10-3-15 ರ ಪತ್ರದಂತೆ ಮಾಹಿತಿ ನೀಡಿ ಸದರಿಯವರು 27-7-2000ದಿಂದ 7-3-2006ರವರೆಗೆ ಸಮುದಾಯು ಕೇಂದ್ರದಲ್ಲಿ ಪ್ರ.ದ.ಸ. ಆಗಿ ಕರ್ತವ್ಯನಿರ್ವಹಿಸಿದ್ದು ಸದರಿ ಅವಧಿಯಲ್ಲಿ ಯಾವುದೇ ಎಪಿಆರ್ ಸಲ್ಲಿಸಿಲ್ಲ ಎದು ಮಾಹಿತಿ ನೀಡಿರುತ್ತಾರೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-173 ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-173(ಎ) ಎಂದು ಗುರುತಿಸಲಾಯಿತು.

8.ದಿನಾಂಕ 19-11-14ರಂದು ಪತ್ರ ಬರೆದು ವೈದ್ಯರು ದೊಡ್ಡಗೆಣೆಗೆರೆ ಪ್ರಾಥಮಿಕ ಆರೋಗ್ಯಕೇಂದ್ರ ಇವರಿಗೆ ಆರೋಪಿತರು ಸದರಿ ಕಛೇರಿಯಲ್ಲಿ ಕೆಲಸ ಮಾಡಿದ ಸಂದರ್ಭದಲ್ಲಿ ಸಲ್ಲಿಸಿದ ಮತ್ತು ಸಲ್ಲಿಸದೇ ಇರುವ ಎಪಿಆರ್ ಮಾಹಿತಿ ನೀಡುವಂತೆ ಕೇಳಿಕೊಂಡಿರುತ್ತೇನೆ. ಅದಕ್ಕೆ ಸದರಿಯಿವರು ದಿಃ24-11-2014 ರ ಪತ್ರದಂತೆ ಮಾಹಿತಿ ನೀಡಿ ಸದರಿಯವರು 5-7-86ರಿಂದ 1-6-92ರವರೆಗೆ ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದ್ವಿ.ದ.ಸ. ಆಗಿ ಕರ್ತವ್ಯನಿರ್ವಹಿಸಿದ್ದು ಸದರಿ ಅವಧಿಯಲ್ಲಿ ಯಾವುದೇ ಎಪಿಆರ್ ಸಲ್ಲಿಸಿಲ್ಲ ಎಂದು ಮಾಹಿತಿ ನೀಡಿರುತ್ತಾರೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-174 ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-174(ಎ) ಎಂದು ಗುರುತಿಸಲಾಯಿತು.

9.ಚಾಸಾ-54ರವರುತಮ್ಮ ತನಿಖಾ ಕಾಲದಲ್ಲಿ ಹಾಸನ ಸರ್ಕಾರಿ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರಿಗೆ ಆರೋಪಿತರು ಸದರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಎಪಿಆರ್ ಸಲ್ಲಿಸಿದ ಬಗ್ಗೆ ಮಾಹಿತಿ ನೀಡುವಂತೆ ಮನವಿ ಸಲ್ಲಿಸಿದ್ದರು. ಅದಕ್ಕೆ ಅವರು ದಿಃ18-12-15ರ ಪತ್ರದಲ್ಲಿ ಸದರಿಯವರು 2012 -2013 ರ ಎಪಿಆರ್ ಪ್ರತಿಗಳನ್ನು ಕಳುಹಿಸಿಕೊಟ್ಟಿದ್ದು 2010 ರಿಂದ 12 ರವರೆಗೆ ಎಪಿಆರ್ ಸಲಿಸಿಲ್ಲ ಎಂಬ ಮಾಹಿತಿ ನೀಡಿರುತ್ತಾರೆ. ಅದನ್ನು ಈಗ ನೋಡುತ್ತಿದ್ದು **ನಿಪಿ-175** ಎಂದು ಅದಕ್ಕೆ ಲಗತ್ತಾದ 3 ಹಾಳೆಗಳನ್ನು ನೋಡುತ್ತಿದ್ದು ಒಟ್ಟಾಗಿ ನಿಪಿ-175(1) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ ಕಾರಣ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**